'ಮುಂಜಾವು' ಜಾಹೀರಾತು ದರ
(ಕಾಲಂ ಸೆಂ. ಮೀ.ಗೆ)
ಹೊರ ಪುಟದಲ್ಲಿ: ೫ ರೂ.
ಇತರ ಪುಟಗಳಲ್ಲಿ: ೪ ರೂ

ಮುಂಜಾವು

ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್.
ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

'ಮುಂಜಾವು' ಚಂದಾ ದರ
ಆಜೀವ ಚಂದಾ ೨೦೦ ರೂ
ವಾರ್ಷಿಕ ಚಂದಾ ೨೦ ರೂ.
ಬಿಡಿ ಪ್ರತಿ ೪೦ ಪೈಸೆ

೨ನೇವರ್ಷ ೭ನೇ ಸಂಚಿಕೆ ೭ನೇಸಂಚಿಕೆ ಗಾಂಧೀ ಜಯಂತಿ ೧೯೮೩ ಭಾನುವಾರ ಕೊಪ್ಪ ಬೆಲೆ ೪೦ ಪೈಸೆ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಕ್ಷೇತ್ರದ ವಿವಿಧೆಡೆ ಬಸ್ ಸೌಕರ್ಯಕ್ಕೆ ಶಾಸಕರ ಒತ್ತಾಯ

(ವರದಿ: ಕೋಣೆಗದ್ದೆ ಪದ್ಮನಾಭ)

ಕೊಪ್ಪ: ಶೃಂಗೇರಿ ಕ್ಷೇತ್ರದ ವಿವಿಧೆಡೆಗಳಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ಸೌಕರ್ಯ ಒದಗಿಸುವತ್ತ ಶಾಸಕ ಗೋವಿಂದಗೌಡರು ಈಚೆಗೆ ಸರ್ಕಾರದ ಗಮನ ಸೆಳೆದಿದ್ದಾರೆ.

ಬೆಂಗಳೂರು–ಕಮ್ಮರಡಿ ನಡುವೆ ಲಕ್ಕವಳ್ಳಿ, ನ. ರಾ. ಪುರ, ಕೊಪ್ಪ ಮಾರ್ಗವಾಗಿ ಪ್ರತಿ ದಿನ ರಾತ್ರಿ ೮ ಗಂಟೆಗೆ ಏಕ ಕಾಲದಲ್ಲಿ ಬಸ್ ಹೊರಡುವುದು ಹಾಗೂ ಚಿಕ್ಕಮಗಳೂರಿನಿಂದ ಸಂಜೆ ೬ಕ್ಕೆ ಹೊರಟು ಕೊಪ್ಪಕ್ಕೆ ಬಂದು ತಂಗುವುದು; ಓಡಾಟ ನಿಂತಿರುವ ಕೊ ೯ ಲಾ ರ–ನ. ರಾ. ಪುರ ಬಸ್ಸನ್ನು ಪುನಃ ಆರಂಭಿಸಿ ಬಾಳೆಹೊನ್ನೂರಲ್ಲಿ ತಂಗುವುದು; ಶೃಂಗೇರಿ–ಪುತ್ತೂರು ಬಸ್ಸಿನ ಪುನರಾರಂಭ, ಬೆಂಗಳೂರು ಮತ್ತು ಪುತ್ತೂರು ಬಸ್ಸುಗಳು ಕಾಫಿ ಸಂಶೋಧನ ಕೇಂದ್ರದ ಮೂಲಕ ಓಡಾಡುವುದು–ಇವು ಶಾಸಕರು ಶಿಫಾರ್ಸು ಮಾಡಿರುವ ಸೌಕರ್ಯಗಳಾಗಿವೆ.

ಶರನ್ನವರಾತ್ರಿ ಉತ್ಸವ

ಶೃಂಗೇರಿ: ಇಲ್ಲಿನ ಶ್ರೀಮಠದಲ್ಲಿ ಅಕ್ಟೋಬರ್ ೬ ರಿಂದ ೧೭ರ ವರೆಗೆ ಶರನ್ನವರಾತ್ರಿ ಉತ್ಸವವು ಇಬ್ಬರೂ ಜಗದ್ಗುರುಗಳ ನೇತೃತ್ವದಲ್ಲಿ ನಡೆಸಲ್ಪಡುತ್ತವೆ.

ಜಾನುವಾರುಗಳಿಗೆ ಚುಚ್ಚುಮದ್ದು ಹಾಕಿಸಿಕೊಳ್ಳಲು ಸೂಚನೆ

ಕೊಪ್ಪ: ಜಾನುವಾರುಗಳ 'ದೊಡ್ಡ ರೋಗ ನಿವಾರಣೆ ಯೋಜನೆ'ಯ ಅಂಗವಾಗಿ ತಾಲ್ಲೂಕಿನ ಎಲ್ಲಾ ಜಾನುವಾರುಗಳಿಗೂ ಮುಂಜಾಗ್ರತೆ ಕ್ರಮವಾಗಿ ಚುಚ್ಚುಮದ್ದನ್ನು ಹಾಕಲಾಗುತ್ತಿದೆ. ಸ್ಥಾರಿಕ ಅಥವಾ ಸ್ಥಳೀಯ–ಯಾವುದೇ ತಳಿಯ ಜಾನುವಾರುಗಳಿರಲಿ, ಎಲ್ಲವರೂ ಈ ಸದವಕಾಶ ಉಪಯೋಗಿಸಿಕೊಂಡು ಚುಚ್ಚುಮದ್ದು ಹಾಕಿಸಿಕೊಳ್ಳಬೇಕೆಂದು ಇಲ್ಲಿನ ಪಶು ವೈದ್ಯಾಧಿಕಾರಿ ಡಾ॥ ಕೆ. ಜಿ. ಶ್ರೀನಿವಾಸ ಮೂರ್ತಿ ಹಾಗೂ ಸದರಿ ಯೋಜನೆಯ ಅಧಿಕಾರಿ ಡಾ॥ ಕೃಷ್ಣಮೂರ್ತಿ ವಿನಂತಿಸಿದ್ದಾರೆ.

ಹರಿಹರಪುರದಲ್ಲಿ ಅ. ೭ ರಿಂದ ೧೫ರ ವರೆಗೆ ಈ ಉತ್ಸವ ನಡೆಯುತ್ತದೆ.

ಶಿವಮೊಗ್ಗ ಅಡಿಕೆ ಪೇಟೆ

ತಾರೀಖು: ೨೮–೯–೮೩

('ವಿವೇಕಂ' ಅವರಿಂದ)

ಸರಕು: ೧೭೭೬ ರಿಂದ ೨೨೯೯

ಬೆಟ್ಟೆ: ೧೫೩೬ ರಿಂದ ೧೬೦೦

ಗೊರಬಲು: ೪೯೯ ರಿಂದ ೬೦೦

ಅಡಿಕೆ ಧಾರಣೆಯಲ್ಲಿ ಹೆಚ್ಚಿನ ಬದಲಾವಣೆ ಉಂಟಾಗಿಲ್ಲ. ಮಾರುಕಟ್ಟೆಗೆ ಹೊಸ "ತೊಡಸಾಲು ಅಡಿಕೆ" ಬರಲು ಪ್ರಾರಂಭವಾಗಿದೆ.

ಕೊಪ್ಪ ಪ್ರ. ದ. ಕಾಲೇಜಿನಲ್ಲಿ ವಿದ್ಯಾರ್ಥಿ ರೈತ ಸಮಿತಿ

ಕೊಪ್ಪ: ಸೆ. ೨೮ ರಂದು ರಾಜ್ಯ ರೈತ ಸಂಘದ ಜಿಲ್ಲಾ ಅಧ್ಯಕ್ಷ ಮ ೯ ಗೆ ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ರೈತ ವಿದ್ಯಾರ್ಥಿಗಳು ಸಭೆ ಸೇರಿ, ಕಾಲೇಜು ಮಟ್ಟದ ವಿದ್ಯಾರ್ಥಿ ರೈತ ಸಮಿತಿಯನ್ನು ಈ ಕೆಳಕಂಡಂತೆ ಸರ್ವಾನುಮತದಿಂದ ಆರಿಸಿದ್ದಾರೆ: ಹೆಚ್. ಆರ್. ಶ್ರೀನಿವಾಸ (ಅಧ್ಯಕ್ಷ), ಕೆ. ಗಣಪತಿ (ರುದ್ರಯ್ಯ) (ಉಪಾಧ್ಯಕ್ಷ), ಎಂ. ಸಿ. ಅಶೋಕ್ (ಕಾರ್ಯದರ್ಶಿ) ಎಲ್. ಎಂ. ಪ್ರಕಾಶ್ (ಸಹ ಕಾರ್ಯದರ್ಶಿ).

ಬಸ್ರಿಕಟ್ಟೆಯಲ್ಲಿ ಉದರದರ್ಶಕ ಸಂತಾನಹರಣ ಶಸ್ತ್ರಚಿಕಿತ್ಸೆ ಶಿಬಿರ

ಬಸ್ರಿಕಟ್ಟೆ: ಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಒಳಪಟ್ಟ ಇಲ್ಲಿನ ಪ್ರಾ. ಆ. ಘಟಕದಲ್ಲಿ ಸೆ. ೨೨ ರಂದು ತಜ್ಞ ವೈದ್ಯರಿಂದ ೪೭ ಮಹಿಳೆಯರಿಗೆ ಉದರದರ್ಶಕ (ಲ್ಯಾಪ್ರೋಸ್ಕೋಪಿಕ್) ಸಂತಾನಹರಣ ಶಸ್ತ್ರಚಿಕಿತ್ಸೆಯನ್ನೂ, ಮ ಗೆ ಜಾ ಲ ದ ಡಾ॥ ಶ್ರೀನಿವಾಸರಾವ್ ಮತ್ತು ಸಂಗಡಿಗರಿಂದ ೧೮೪ ಜನರಿಗೆ ನೇತ್ರ ಪರೀಕ್ಷಾ ಶಿಬಿರವನ್ನೂ ಕೊಪ್ಪದ ಲಯನ್ಸ್ ಕ್ಲಬ್ ಆಶ್ರಯದಲ್ಲಿ ನಡೆಸಲಾಯಿತು.

ಭೂನ್ಯಾಯ ಮಂಡಳಿಗಳಿಗೆ ನೇಮಕಾತಿ

ಕೊಪ್ಪ: ಕ್ಷೇತ್ರದ ೩ ತಾಲ್ಲೂಕುಗಳ ಭೂನ್ಯಾಯ ಮಂಡಳಿಗಳಿಗೆ ಈ ಕೆಳಕಂಡವರನ್ನು ನೇಮಿಸಲಾಗಿದೆ.

ಶೃಂಗೇರಿ: [illegible] ಭಟ್, ಗೋಪಾಲ [illegible] [illegible] [illegible], ಕೊಡತಲು [illegible]; ಕೊಪ್ಪ [illegible] ನಂಜುಂಡ ಭಟ್, [illegible] [illegible] [illegible], ಗುಡಿಕಲ್ [illegible] ಳು; ನ.ರಾ.ಪುರ: [illegible] [illegible] ಗೌಡ, ಎಂ. ಎಸ್. [illegible], [illegible] [illegible] ಅಬ್ದುಲ್ [illegible], [illegible].

ವಿಶೇಷ ಲೇಖನ

ಗಾಂಧೀ ವಿಚಾರಧಾರೆ

ಸಂಗ್ರಹ: ಡಾ|| ಎಸ್. ವಿ. ಮಲ್ಲಿಕಾರ್ಜುನ ಭಟ್ಟ.

"ಆಡು ಮುಟ್ಟದ ಗಿಡವಿಲ್ಲ" ಎಂಬಂತೆ "ಗಾಂಧೀಜಿಯವರ ವಿಚಾರ ಧಾರೆಯು ಪ್ರವಹಿಸದ ದಿಕ್ಕಿಲ್ಲ" ಎಂಬುದೂ ಒಂದು ವಾಡಿಕೆಯ ಮಾತು. ಅವರ ವಿಚಾರಧಾರೆ ಅಷ್ಟು ವ್ಯಾಪಕವಾಗಿದೆ ಸರ್ವತೋಮುಖವಾಗಿದೆ. ಎಲ್ಲಾ ಸಮಕಾಲೀನ ಸಮಸ್ಯೆಗಳ ಮೇಲೂ ಅವರು ಬೆಳಕು ಬೀರಿದ್ದಾರೆ. ಅವರನ್ನು "ರಾಷ್ಟ್ರಪಿತ"ನೆಂದೂ ಅವರ ಮಾರ್ಗದರ್ಶನದಲ್ಲಿಯೇ ನಮ್ಮ ರಾಷ್ಟ್ರವು ಮುನ್ನಡೆಯುತ್ತಿದೆಯೆಂದೂ ಹೇಳಿಕೊಳ್ಳುವ ನಾವು, ಅವರ ತತ್ವಗಳಲ್ಲಿ ಕೆಲವನ್ನಾದರೂ ಆಗೀಗ ಒಮ್ಮೆ ಜ್ಞಾಪಿಸಿಕೊಂಡು ಅನುಷ್ಠಾನಕ್ಕೆ ತರುವುದು ಅವಶ್ಯಕ. ಆದುದರಿಂದ ವಿವಿಧ ವಿಷಯಗಳ ಮೇಲೆ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

—ಎಸ್. ವಿ. ಎಂ.

ಪೂರ್ಣ ಸ್ವಾತಂತ್ರ್ಯ

"ನನ್ನ ಕಲ್ಪನೆಯ ಸ್ವಾತಂತ್ರ್ಯವು ಬಡ ...ರನ ಸ್ವಾತಂತ್ರ್ಯ. ಜೀವನಾವಶ್ಯಕ ವಸ್ತು ...ಗಳೆಲ್ಲವೂ ಅರಸರಿಗೂ ಹಣವಂತರಿಗೂ ...ದೊರೆಯುವಂತೆ ಬಡವರಿಗೂ ದೊರೆಯಬೇ...ಕು ಹಾಗಾಗುವವರೆಗೆ ಸ್ವಾತಂತ್ರ್ಯವು ...ಪೂರ್ಣ ಸ್ವಾತಂತ್ರ್ಯವೆನಿಸುವುದಿಲ್ಲ."

(ಯಂಗ್ ಇಂಡಿಯಾ. ಪು.೪೬)

ಸ್ವತಂತ್ರ ರಾಷ್ಟ್ರದ ಗುರಿ

"ವ್ಯಕ್ತಿಯು ಕುಟುಂಬಕ್ಕಾಗಿ, ಕುಟುಂ...ಬವು ಗ್ರಾಮಕ್ಕಾಗಿ, ಗ್ರಾಮವು ಜಿಲ್ಲೆಗಾಗಿ, ...ಜಿಲ್ಲೆಯು ರಾಜ್ಯಕ್ಕಾಗಿ, ರಾಜ್ಯವು ದೇಶಕ್ಕಾ...ಗಿ ಪ್ರಾಣಾರ್ಪಣ ಮಾಡಲು ಸಿದ್ಧವಾಗಿರ...ಬೇಕು. ಈ ತತ್ವವನ್ನು ಸ್ವದೇಶ ಭಕ್ತಿಯು ...ಹೇಗೆ ಕಲಿಸುವುದೋ ಹಾಗೆ ಒಂದು ದೇಶವು ...ಅಗತ್ಯಬಿದ್ದರೆ ಇಡೀ ಜಗತ್ತಿನ ಹಿತಕ್ಕಾಗಿ ...ಸಾಯಲು ಸಿದ್ಧವಾಗಿರಬೇಕು. ಇದೇ ಸ್ವತಂ...ತ್ರ ರಾಷ್ಟ್ರದ ಗುರಿ. ಇದಕ್ಕಾಗಿಯೇ ದೇಶ ... ಸ್ವತಂತ್ರವಾಗಿರಬೇಕು."

(ಯಂ. ಇಂ. ಪು. ೨೪)

ಹಕ್ಕು—ಕರ್ತವ್ಯ

...ಎಲ್ಲರೂ ತಮ್ಮ ತಮ್ಮ ಹಕ್ಕುಗಳನ್ನು ...ಮಾತ್ರ ಸಾಧಿಸುವುದರಲ್ಲಿ ಮಗ್ನರಾಗಿ ತಮ್ಮ ...ಕರ್ತವ್ಯಗಳನ್ನು ಮರೆತರೆ ಗೊಂದಲ ಮತ್ತು ...ಅರಾಜಕತೆಗಳುಂಟಾಗುತ್ತವೆ. ಪ್ರತಿಯೊ...ಬ್ಬರೂ ತಮ್ಮ ಹಕ್ಕು ಸಾಧಿಸುವುದನ್ನು ...ಬಿಟ್ಟು ಕರ್ತವ್ಯನಿರತರಾದರೆ ಸುವ್ಯವಸ್ಥಿತವಾದ ಸ್ವರಾಜ್ಯವು ನೆಲೆಗೊಳ್ಳುತ್ತದೆ. ಹಕ್ಕು ಅಬಾಧಿತವಾಗಿ ಉಳಿದಿರುತ್ತದೆ.

(ಹರಿಜನ. ೬–೭–೧೯೪೭)

ಶಿಕ್ಷಣ–ವಿದ್ಯಾರ್ಥಿ

"ಶಿಕ್ಷಣವು ಸತ್ಯ ಮತ್ತು ಪಾವಿತ್ರ್ಯದ ತಳಹದಿಯ ಮೇಲೆ ರೂಪಿತವಾಗದಿದ್ದರೆ ಅದು ನಿಷ್ಪ್ರಯೋಜಕ. ಹಾಗೆಯೇ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಜೀವನದ ಪಾವಿತ್ರ್ಯದ ಬಗ್ಗೆ ಎಚ್ಚರ ವಹಿಸದಿದ್ದರೆ ಅವರು ಎಂಥ ಪದವಿ ಪಡೆದರೂ ನಷ್ಟರಾದಂತೆಯೇ ಸರಿ.

(ಸಿಲೋನಿನಲ್ಲಿ ಗಾಂಧೀಜಿ. ಪು. ೭೧)

ಗ್ರಾಮೋದ್ಯೋಗ

"ಗ್ರಾಮೋದ್ಯೋಗಗಳು ಬೆಳೆಯದಿದ್ದರೆ, ನೆಲವನ್ನು ಅಗೆದು ಕೆಲವು ತುತ್ತು ಅನ್ನ ದೊರಕಿಸುವುದೊಂದೇ ಹಳ್ಳಿಗರ ಉದ್ಯೋಗವಾಗುತ್ತದೆ. ಆ ತುಂಡು ಭೂಮಿಯ ಸಾಗುವಳಿಯಿಂದ ಅವರ ಬೇಸಾಯ ಲಾಭದಾಯಕವಾಗುವುದಿಲ್ಲ. ಆದುದರಿಂದ ಹಳ್ಳಿಗರ ಬದುಕು ಈಗ ನಿರ್ಜೀವವಾಗಿದೆ. ಅವರ ಸುಖ ಸಮೃದ್ಧಿಗಾಗಿ ಗ್ರಾಮೋದ್ಯೋಗಗಳನ್ನು ಪುನರುಜ್ಜೀವನಗೊಳಿಸದೆ ಬೇರೆ ದಾರಿಯಿಲ್ಲ"

(ಖಾದಿ-ಗ್ರಾಮೋದ್ಯೋಗ. ಪು. ೫೨–೫೩)

ಸತ್ಯ–ಅಹಿಂಸೆ

"ಸತ್ಯ ಮತ್ತು ಅಹಿಂಸೆಗಳು ಋಷ್ಯಾಶ್ರಮಗಳಲ್ಲಿ ಅಡಗಿರುವ ವಸ್ತುಗಳಲ್ಲ. ಸಾರ್ವಜನಿಕ ನ್ಯಾಯಾಸ್ಥಾನಗಳಲ್ಲಿ, ಶಾಸನ ಸಭೆಗಳಲ್ಲಿ ಮತ್ತು ಸಹಕಾರ ಸಂಘಗಳಲ್ಲಿ ಎದ್ದು ಕಾಣುವ ಸದ್ಗುಣಗಳಾಗಬೇಕು".

(ಹರಿಜನ. ೯–೫–೧೯೩೭. ಪು. ೯೮)

ದಲಿತರ ಉದ್ಧಾರ

"ಗೋಡೆಯನ್ನು ಬುಡದಿಂದ ಕಟ್ಟುವಂತೆ, ಸಮಾಜದ ಉದ್ಧಾರ ಕಾರ್ಯವನ್ನು ಬುಡದಿಂದಲೇ ಆರಂಭಿಸಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಆಯ್ದುಕೊಂಡು ಅವನ ಉದ್ಧಾರದಿಂದ ನವಭಾರತದ ಸಮಾನತೆಯ ಸೌಧವನ್ನು ನಿರ್ಮಿಸಬೇಕು."

(ಹರಿಜನ. ಡಿ. ೧೯೩೭.)

ಆಡಳಿತ

"ಅಯೋಗ್ಯರ ಕೈಯಲ್ಲಿ ಆಡಳಿತ ಸಿಕ್ಕಿದರೆ ಅದು ಪರತಂತ್ರಕ್ಕಿಂತ ಉತ್ತಮವೇನಲ್ಲ. ಆಡಳಿತ ನಡೆಸುವವರು ಶುದ್ಧ ಹಸ್ತರೂ ಸತ್ಯ ನಿಷ್ಠರೂ ಆಗಿದ್ದರೆ ಮಾತ್ರ ಸ್ವಾತಂತ್ರ್ಯದ ಸಾರ್ಥಕತೆಯಾಗುತ್ತದೆ."

ಸ್ವಾತಂತ್ರ್ಯ. ಪು. ೭೦

ಅಧಿಕಾರ

"ಅಧಿಕಾರವನ್ನು ಎರಡು ರೀತಿಯಿಂದ ಪಡೆಯಲು ಸಾಧ್ಯ. ಒಂದು ದಂಡನೆಯ ಭೀತಿಯಿಂದ ಮತ್ತೊಂದು ಒಲುಮೆಯಿಂದ. ಮೊದಲನೆಯದಕ್ಕಿಂತ ಎರಡನೆಯದು ನೂರುಮಡಿ ಉತ್ತಮ. ಸ್ವತಂತ್ರ ಭಾರತಕ್ಕೆ ಅದನ್ನೇ ನಾನು ಬಯಸುವುದು"

(ನನ್ನ ಕನಸಿನ ಭಾರತ. ಪು. ೧೧) ‡‡

ನಿರುದ್ಯೋಗಿಗಳು ಸ್ವಾಮಿ
ನಾವು ನಿರುದ್ಯೋಗಿಗಳು

ನಾಲ್ಕು ಗೋಡೆಯ ಮಧ್ಯೆ ಕೆಲ ವರ್ಷ
ಸವೆಸಿ, ಡಿಗ್ರಿ ಹೊತ್ತು ಹೊರ
ಬಂದವರು
ಹೂವಿನೆಸಳನು ಹುಳು ಕೊರೆಯುವಂತೆ
ಚಿಂತೆ ನೂರಾರು ತುಂಬಿಕೊಂಡವರು
ಮರಳಿನಲ್ಲಿ ಕನಸಿನ ಮನೆ ಕಟ್ಟಿ
ನನಸಿನ ರಾಜರಾಗಲು
ಹಾತೊರೆಯುವವರು

ನಿರುದ್ಯೋಗಿಗಳು ಸ್ವಾಮಿ
ನಾವು ನಿರುದ್ಯೋಗಿಗಳು
ಭ್ರಷ್ಟಾಚಾರ, ಲಂಚ, ಪ್ರಭಾವಗಳ
ರಾಜ್ಯದಲ್ಲಿ
ದಾರಿಗಾಣದೆ ಹಗಲು ಕುರುಡಾದವರು
ಹಿಂದಕ್ಕೂ ಹೋಗಲಾರದೆ, ಮುಂದಕ್ಕೂ
ಚಲಿಸಲಾಗದೆ
ಭವ್ಯ ಭವಿಷ್ಯತ್ತನ್ನು ಬಲಿಕೊಟ್ಟವರು
ಬೆಂಗಾಡಿನಲ್ಲಿ ಹಸಿರು ಚೆಲ್ಲುವ ಈ
ಯೌವನದಲ್ಲೂ
ಅಪ್ಪ–ಅಮ್ಮಂದಿರಿಗೆ ಬೇಡವಾದವರು

ನಿರುದ್ಯೋಗಿಗಳು ಸ್ವಾಮಿ
ನಾವು ನಿರುದ್ಯೋಗಿಗಳು
ದಿನಪ್ರತಿ ವರ್ತಮಾನ ಪತ್ರಿಕೆಗಳ
'ವಾಂಟೆಡ್'
ಕಾಲಂಗಾಗಿ ತಡಕಾಡಿ
ಅರ್ಜಿ ಗುಜರಾಯಿಸುವವರು
ಸರ್ಕಾರದ ನಿರುತ್ತರದಿಂದ
ಜೀವ ಭಾರವಾಗಿ
ಇಪ್ಪತ್ತೈದರ ಹರಯದಲ್ಲೂ,
ಎಪ್ಪತ್ತೈದಾದವರಂತೆ ಬಾಡಿದವರು.
ರಾಜಕೀಯ, 'ನೋ ವೇಕೆನ್ಸಿ'ಗಳಿಂದ
ಕ್ಷಣ ಕ್ಷಣದಲ್ಲೂ
ಸತ್ತು ಸತ್ತೂ ಬದುಕುತ್ತಿರುವವರು.

—ಎಲ್. ಎನ್. ಸದಾಶಿವ ಭಾಸರಿ,
ಲೋಕೇಶ್ವರ.

ತಾಲ್ಲೂಕಿನ ಯುವಜನ ಸಂಘಗಳಿಗೆ ಒಕ್ಕೂಟದ ಅಧ್ಯಕ್ಷರ ಮನವಿ

ತಾ॥ ಯುವಜನ ಸಂಘಗಳ ಸದಸ್ಯರಿಗೆ,

ಕೊಪ್ಪ ತಾ. ಅ. ಮಂಡಳಿ ರದ್ದಾದಾಗಿನಿಂದಲೂ ಮಂಡಳಿಯಿಂದ ನಡೆಯಬೇಕಾದ ತಾಲ್ಲೂಕಿನ ಕೆಲಸಗಳು ಬಹಳ ನಿಧಾನವಾಗಿವೆ. ಹಳ್ಳಿಯ ಬಡಜನರ ಹಾಗೂ ಸಾರ್ವಜನಿಕ ಕೆಲಸಗಳತ್ತ ತಾಲ್ಲೂಕಿನ ಯುವಕ ಸಂಘಗಳು ಗಮನ ಹರಿಸಬೇಕಾಗಿದೆ. ತಾಲ್ಲೂಕು ಯುವಜನ ಒಕ್ಕೂಟದ ಅಧ್ಯಕ್ಷನಾಗಿ ನಿಮ್ಮೊಂದಿಗೆ ಚಟುವಟಿಕೆಗಳಲ್ಲಿ ಸೇರಲು ಯಾವಾಗಲೂ ಸಿದ್ಧನಿದ್ದೇನೆ.

ಆಸುಪಾಸಿನ ಕೆಲವು ಹಳ್ಳಿಗಳಲ್ಲಿ ಬಡಜನರ ರಕ್ತ ಹೀರುವ ಮಟ್ಕಾ ಜೂಜು ಮತ್ತೆ ತಲೆಯೆತ್ತುತ್ತಿದೆ ಎನ್ನಲಾಗುತ್ತಿದೆ. ಈ ಬಗ್ಗೆ ಸಹ ಯುವಜನರು ನಿಗ ವಹಿಸಿ ಮಟ್ಕಾ ಕಳ್ಳರನ್ನು ಸದೆಬಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಹಲವಾರು ಕಡೆಗಳಲ್ಲಿ ವಯಸ್ಕರ ಶಿಕ್ಷಣ ಶಾಲೆಗಳು ಸರಿಯಾಗಿ ನಡೆಯದಿದ್ದರೂ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎನ್ನಲಾಗಿದೆ. ವಯಸ್ಕರು ಇಂಥ ಶಾಲೆ ಸೌಲಭ್ಯಗಳನ್ನು ಉಪಯೋಗ ಪಡಿಸಿಕೊಳ್ಳುವಂತೆ ಯುವಕ ಸಂಘಗಳು ಪ್ರಯತ್ನಿಸಬೇಕು. ಹಾಗೂ ಪ್ರಯೋಜನವಾಗದಿದ್ದಲ್ಲಿ ಅಂಥ ಶಾಲೆಗಳನ್ನು ಮುಚ್ಚಿ ಅಗತ್ಯವಿರುವ ಬೇರೆ ಕಡೆ ತೆರೆಯಲು ಅಧಿಕಾರಿಗಳಿಗೆ ತಿಳಿಸಬೇಕು.

—ಹೆಚ್. ಎಸ್. ಜಯಪ್ರಕಾಶ್,
ತಾ॥ ಯುವಜನ ಒಕ್ಕೂಟದ ಅಧ್ಯಕ್ಷ,
ಕೊಪ್ಪ.

ಓದುಗರ ಪುಟ

"ದುರುದ್ದೇಶದ ಅಪಪ್ರಚಾರ"

ಮಾನ್ಯರೆ,

ನಿಮ್ಮ ೧೮–೯–೮೭ರ ಪತ್ರಿಕೆಯಲ್ಲಿ ನಾನು ಬಗರ್ ಹುಕುಂ ಸಾಗುವಳಿ ಮಾಡಿ ಸಮೃದ್ಧ ಕಾಡು ನಾಶಮಾಡಿರುವುದಾಗಿ ವರದಿಯಾಗಿದೆ.

ಆದರೆ ನಾನು ಸದ್ರಿ ಹರಳಾನೆ ಗ್ರಾಮದ ಸ. ನಂ. ೯೩, ೯೪ ರಲ್ಲಿ ೫ ಎಕ್ರೆಗೆ ೧೯೭೦ ರಿಂದಲೂ ದರ್ಖಾಸ್ತು ಅರ್ಜಿ ಸಲ್ಲಿಸಿದ್ದೇನೆ. ನಂತರ ೧೯೭೭ ರಲ್ಲೂ ಸಲ್ಲಿಸಿದ್ದೇನೆ. ಆದರೆ ಇದುವರೆಗೂ ನನಗೆ ಸಾಗುವಳಿ ಚೀಟಿ ಸಿಕ್ಕಿಲ್ಲ. ನಂತರ ನಾನು ಈ ಜಾಗಕ್ಕೆ ಬೇಲಿ ಹಾಕಿ ಖುಷ್ಕಿ ಬೆಳೆಯುತ್ತಿದ್ದೇನೆ. ಇದರಿಂದ ಬೇರೆ ಜನರಿಗೆ ಯಾವ ತೊಂದರೆಯೂ ಇಲ್ಲ. ಈ ಭೂಮಿ ನನ್ನ ಜಮೀನಿಗೆ ಒತ್ತಿನಲ್ಲೇ ಇದ್ದು, ಸ. ನಂ. ೯೪ ರಿಂದ ಬರುವ ಒಂದು ಸಲಿನ ನೀರು ಬಿಟ್ಟರೆ ನಮಗೆ ಕುಡಿಯುವುದಕ್ಕೂ ಜಮೀನು ಕೃಷಿಗೂ ಬೇರೆ ನೀರಿಲ್ಲ.

ಈ ವಿಷಯದಲ್ಲಿ ಜಿಲ್ಲಾಧಿಕಾರಿಗಳಿಗೂ ಶಾಸಕರಿಗೂ ದೂರು ಕೊಟ್ಟವರಿಗೆ ಏಳೆಂಟು ಎಕ್ರೆ ಬಾಗಾಯ್ತು, ಸುತ್ತಾ ಸುಮಾರು ೫೦ ಎಕ್ರೆ ಹೊಲ ಇದ್ದು, ಇವರು ಸ. ನಂ. ೯೩, ೯೪ ರಲ್ಲಿ ಕಟ್ಟಿಗೆ, ಗಳ, ಕಂಬಗಳನ್ನು ಕಡಿದುದಲ್ಲದೆ ಮರ ಕಡಿದು ನಾಟ ಕೊಯ್ಸಿ ಮನೆ ಕಟ್ಟಿಸಿದ್ದಾರೆ. ನಾನೇನೂ ಅರಣ್ಯ ನಾಶ ಮಾಡಿಲ್ಲ.

ಸ. ನಂ. ೯೪ರ ಭೂಮಿ ಇಲ್ಲಿಂದ ಒಂದು ಮೈಲಿ ದೂರದ ಚಿಕ್ಕನಜಾಡ್ಯದವರಿಗೆ ರಿಕಾರ್ಡ್ ಆದ ವಿಷಯ ನನಗೆ ಗೊತ್ತಿಲ್ಲ. ಅವರು ಹಿಂದೆ ಅದಕ್ಕೆ ದರ್ಖಾಸ್ತು ಕೊಟ್ಟಾಗ ನಾನು ತಕರಾರು ಸಲ್ಲಿಸಿದ್ದೇನೆ. ನನ್ನ ಜಮೀನಿನ ಬೇರೆ ಮಗ್ಗುಲಿಗೆ ಸರ್ಕಾರಿ ಜಾಗ ಇದ್ದರೂ ಅದಕ್ಕೆ ಈಗಾಗಲೇ ಬೇರೆಯವರು ದರ್ಖಾಸ್ತು ಕೊಟ್ಟಿದ್ದಾರೆ.

ನಾನು ಬಡವನಾದ್ದರಿಂದ ಎಲ್ಲರ ಸಹಕಾರ ಪಡೆದುಕೊಳ್ಳುತ್ತಿದ್ದೇನೆಯೇ ವಿನಃ ಯಾವ ಶ್ರೀಮಂತರಿಗೂ ಈ ದರ್ಖಾಸ್ತನ್ನು ಮಾಡುವ ಉದ್ದೇಶವಿಲ್ಲ. ೧೯೭೦ ರಿಂದಲೇ ನಾನು ಖುಷ್ಕಿ ಮಾಡಿದ್ದಕ್ಕೆ ತಾ॥ ಕಛೇರಿಯಿಂದ [illegible] ಬಿಡಿಸಿದ್ದಾರೆ ಹೊರತು ಗ್ರಾಮಲೆಕ್ಕಿಗರ ಕೈವಾಡ ಇಲ್ಲ.

ಪಕ್ಕದ ಗ್ರಾಮದ ಕೆಲವರು ವಿನಾಕಾರಣ ನನಗೆ ತೊಂದರೆ ಕೊಡುತ್ತ, ನನ್ನನ್ನು ಈ ಜಾಗದಿಂದಲೇ ಹೊರಡಿಸಲು ನನಗೆ ತೊಂದರೆ ಕೊಡುತ್ತಿದ್ದಾರೆ. ಅದ್ದರಿಂದ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ನನಗೆ ಸಾಗುವಳಿ ಚೀಟಿ ಕೊಡಬೇಕಾಗಿ ಕೋರುತ್ತೇನೆ.

—ಕೃಷ್ಣ ದೇವಾಡಿಗ,
ಹರಳಾನೆ, ಮೇಗೂರು, ಕೊಪ್ಪ ತಾ॥

ಉಪನ್ಯಾಸಕರಿಲ್ಲದೆ ಸೊರಗಿದ ಕಮ್ಮರಡಿ ಕಿರಿಯ ಕಾಲೇಜು: ವಿದ್ಯಾರ್ಥಿಗಳಿಂದ ಚಳುವಳಿ ಬೆದರಿಕೆ

ಕಳೆದ ವರ್ಷ ಆಗಸ್ಟ್‌ನಲ್ಲಿ ಕಲಾವಿಭಾಗದೊಂದಿಗೆ ಆರಂಭವಾದ ಇಲ್ಲಿನ ಕಿರಿಯ ಕಾಲೇಜಿನಲ್ಲಿ ಪಾಠ–ಪ್ರವಚನಗಳು ಚೆನ್ನಾಗಿ ನಡೆದು ಹೆಚ್ಚಿನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರು. ಆದರೆ ಈ ವರ್ಷ ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರ ಉಪನ್ಯಾಸಕರುಗಳಿಗೆ ವರ್ಗವಾಗಿದ್ದು, ಬೇರೆಯವರು ಬಂದಿಲ್ಲ. ಈ ವರ್ಷ ವಾಣಿಜ್ಯಶಾಸ್ತ್ರವಿಭಾಗ ಬೇರೆ ಪ್ರಾರಂಭವಾಗಿದ್ದು, ಅದಕ್ಕೂ ಉಪನ್ಯಾಸಕರು ಬಂದಿಲ್ಲ. ಬರುವ ಸೂಚನೆಗಳೂ ಇಲ್ಲ. ಈ ವಿಷಯವನ್ನಾದರೂ ಉಪನ್ಯಾಸಕರು ಬರಬಹುದೆಂಬ ಆಸೆಯಿಂದ ಕಲಾವಿಭಾಗದ ಹಲವು ವಿದ್ಯಾರ್ಥಿಗಳು ಈಗಾಗಲೇ ಈ ವಿಭಾಗಕ್ಕೆ ಸೇರಿದ್ದಾರೆ. ಉಪನ್ಯಾಸಕರುಗಳಿಲ್ಲದೆಯೇ ಮಧ್ಯ ಅವಧಿಯ ಪರೀಕ್ಷೆ ಕೂಡ ಮುಗಿದಿದೆ. ಇನ್ನಾದರೂ ಉಪನ್ಯಾಸಕರು ನೇಮಕವಾಗದಿದ್ದಲ್ಲಿ ಎರಡನೇ ವರ್ಷದ ವಿದ್ಯಾರ್ಥಿಗಳ ಪಾಡು ಕೇಳಬೇಕಾಗುತ್ತದೆ. ಈಚೆಗೆ ಕಾಲೇಜಿಗೆ ಭೇಟಿ ನೀಡಿದ್ದ ಶಾಸಕ ಗೋವಿಂದ ಗೌಡರಿಗೆ ಈ ವಿಷಯ ತಿಳಿಸಿದಾಗ ನೇಮಕಾತಿಗೆ ವಿಚಾರಿಸುವುದಾಗಿ ತಿಳಿಸಿದ್ದರು. ಆದರೆ ಇನ್ನೂ ನೇಮಕವಾಗಿಲ್ಲ. [illegible] ನೇಮಕಗೊಳಿಸದಿದ್ದಲ್ಲಿ ವಿದ್ಯಾರ್ಥಿಗಳು ಮುಷ್ಕರ ಹೂಡುವುದಾಗಿ [illegible]ತ್ತಿದ್ದಾರೆ.

—[illegible]

ಅಬ್ಕಾರಿ ಇಲಾಖೆ ಮತ್ತು ಗುತ್ತಿಗೆದಾರರಿಗೆ ರೈತ ಸಂಘದ ಎಚ್ಚರಿಕೆ

ಕೊಪ್ಪ: ಸಾರಾಯಿಯ ಅಳತೆಯಲ್ಲಿ ವಂಚನೆ ಮತ್ತು ನೀರಿನ ಬೆರಿಕೆಗಳ ಬಗ್ಗೆ ಕಾನೂನು ಕ್ರಮ ಕೈಗೊಳ್ಳುವುದಾಗಿ ರೈತ ಸಂಘಕ್ಕೆ ಲಿಖಿತ ಹೇಳಿಕೆ ಕೊಟ್ಟಿದ್ದರೂ ನಿಷ್ಕ್ರಿಯರಾಗಿರುವ ಅಧಿಕಾರಿಗಳ ವಿರುದ್ಧವೂ, ರೈತ ಸಂಘ ಕೊಟ್ಟಿದ್ದ ತಿಳುವಳಿಕೆಯ ನಿರ್ಲಕ್ಷ್ಯದಿಂದಿರುವ ಕಂಟ್ರಾಕ್ಟರುಗಳ ವಿರುದ್ಧವೂ ನೇರ ಕ್ರಮ ಕೈಗೊಳ್ಳಬೇಕಾದೀತೆಂದು ಕೊಪ್ಪ ತಾ॥ ರೈತ ಸಂಘ ಎಚ್ಚರಿಸಿದೆ.

ಸರ್ಕಾರಿ ಚೆಲ್ಲೆಲ್ಲೇಟರಿಗೆ ೬ ರೂ. ಇದ್ದರೂ ೩ ರೂ. ಗಳಂತೆ ಮಾರಿ ತಿಂಗಳಿಗೆ ಲಕ್ಷಾಂತರ ರೂ. ಲಾಭ ಸಂಪಾದಿಸುತ್ತ ಜನರನ್ನು 'ಹಗಲು ದರೋಡೆ' ಮಾಡುವುದನ್ನು ನಿಲ್ಲಿಸುವಂತೆ ರೈತ ಸಂಘ ಕಂಟ್ರಾಕ್ಟರುಗಳಿಗೆ ಎಚ್ಚರಿಕೆ ನೀಡಿದೆ.

ವಿದ್ಯಾರ್ಥಿ ಪರಿಷತ್ತಿನ ಕೊಪ್ಪ ಶಾಖೆ ಆರಂಭ

ಕೊಪ್ಪ: ಇಲ್ಲಿನ ಕಿರಿಯ ಕಾಲೇಜಿನ ಪ್ರಾಂಶುಪಾಲರಾದ ಜಿ. ವಿ. ಕಿರಗಿಯವರ ಅಧ್ಯಕ್ಷತೆಯಲ್ಲಿ ಸೆ. ೨೪ ರಂದು ನಡೆದ ವಿದ್ಯಾರ್ಥಿಗಳ ಸಭೆಯಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಕೊಪ್ಪ ಶಾಖೆಯು ಉದ್ಘಾಟಿಸಲ್ಪಟ್ಟು ಶಾಖೆಯ ಪದಾಧಿಕಾರಿಗಳನ್ನು ಆಯ್ಕೆಮಾಡಲಾಯಿತು. ಬಾಲಚಂದ್ರನಾಯಕ್ (ಅಧ್ಯಕ್ಷ) ಶ[illegible] (ಉಪಾಧ್ಯಕ್ಷ) ಮಾ.ಶೀ. ಗಣಪತಿ (ಕಾರ್ಯದರ್ಶಿ) ಉಮಾ.ಪ್ರಿ. [illegible] ಮತ್ತು ನಾಗಭೂಷಣ (ಸಹಕಾರ್ಯದರ್ಶಿಗಳು) ರತ್ನಾಕರ ಎ.ಎಸ್. (ಖಜಾಂಚಿ) ಹಾಗೂ ಹತ್ತು ಮಂದಿ ಸದಸ್ಯರನ್ನು ಸರ್ವಾನುಮತದಿಂದ ಆರಿಸಲಾಯಿತು.

ಜಾನುವಾರು ತಳಿ ಅಭಿವೃದ್ಧಿ ಕೇಂದ್ರ ತಾತ್ಕಾಲಿಕ ನಿಲುಗಡೆ

ಹರಿಹರಪುರ: ಇಲ್ಲಿಗೆ ಸಮೀಪದ [illegible] ಮುಕ್ಕಿಯ ಖಾಸಗಿ ಜಾನುವಾರು 'ತಳಿ' ಅಭಿವೃದ್ಧಿ ಕೇಂದ್ರದವರು, ಸದ್ಯ ಸುದೃಢಗೊಂಡ ಬೀಜದ ಹೋರಿಯ ಅಭಾವವಿರುವುದರಿಂದ ಹೋರಿ, ಕೋಣಗಳ ಸೌಲಭ್ಯವನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದು ಇಷ್ಟರಲ್ಲಿಯೇ ಪುನಃ ಆರಂಭಿಸುವುದಾಗಿ ತಿಳಿಸಿದ್ದಾರೆ.

ಲಾಟರಿ ಕುರ್ಚಿ!

ಕೊಪ್ಪ: ಇಲ್ಲಿನ ವ್ಯ.ಸೇ.ಸ.ಸಂಘದ ಅಧ್ಯಕ್ಷಪಟ್ಟ ಈ ಬಾರಿ ಇತ್ಯರ್ಥವಾದದ್ದು 'ಲಾಟರಿ' ವಿಧಾನದಿಂದ! ಸೆ. ೧೪ ರಂದು ಚುನಾವಣೆ ನಡೆದಾಗ ಕೆ.ಎಸ್. ಧರ್ಮೇಗೌಡ ಮತ್ತು ಬಿ. ಆರ್. ಪರಮೇಶ್ವರ ಇಬ್ಬರಿಗೂ ತಲಾ ೫ ಮತಗಳು ಬಂದು, ಕಡೆಗೆ ಚೀಟಿ ಎತ್ತಲಾಗಿ ಕೆ. ಸ್. ಧರ್ಮೇಗೌಡರನ್ನು ಅಧ್ಯಕ್ಷ ಕುರ್ಚಿ ಕೈ ಹಿಡಿದು ಕೂರಿಸಿಕೊಂಡಿತು ಎಂದು ತಿಳಿದು ಬಂದಿದೆ.

ಸಾಗುವಳಿಚೀಟಿಗೆ ಒತ್ತಾಯಿಸಿ ದಲಿತರ ಬೃಹತ್ ಪ್ರದರ್ಶನ

ಭೂಹೀನ ದಲಿತರು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂಮಿಗೆ ಹಕ್ಕುಪತ್ರ ಕೊಡುವಂತೆ ಸರ್ಕಾರವನ್ನು ಒತ್ತಾಯಿಸಲು ಸೆ. ೨೬ ರಂದು ದ.ಸಂ.ಸಮಿತಿಯ ಚಿಕ್ಕಮಗಳೂರು ತಾ॥ ಶಾಖೆ ಭೂಹೀನ ದಲಿತರ ಬೃಹತ್ ಮೆರವಣಿಗೆ ಏರ್ಪಡಿಸಿತ್ತು.

ಪೆನ್‌ಶನ್‌ದಾರರ ಸಭೆ

ಕೊಪ್ಪ: ರಾಜ್ಯ ಪೇಶನ್‌ದಾರರ ಸಂಘದ ಕೊಪ್ಪ ಶಾಖೆಯ ಸರ್ವಸದಸ್ಯರ ಸಭೆ ಸೆ. ೨೨ ರಂದು ಸಿ. ಹೆಚ್. ವಾಸುದೇವ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಪೇಶನ್ನನ್ನು ಪ್ರತಿ ತಿಂಗಳ ಮೊದಲ ತಾರೀಖಿನಂದೇ ಬ್ಯಾಂಕ್ ಮೂಲಕ ಪಾವತಿಸುವ ವ್ಯವಸ್ಥೆ ಮಾಡುವಂತೆ ಜಿಲ್ಲಾ ಮತ್ತು ತಾ॥ ಖಜಾನಾಧಿಕಾರಿಗಳನ್ನು ಕೋರಲಾಯಿತು. ಶೃಂಗೇರಿ ತಾ॥ ನ ಪೇಶನ್‌ದಾರರು ಪ್ರತ್ಯೇಕ ಶಾಖೆ ರಚಿಸದೆ ಇಲ್ಲಿನ ಶಾಖೆಗೇ ಸೇರುವುದಕ್ಕೆ ಒಪ್ಪಿಗೆ ನೀಡಲಾಯಿತು.

ಪ್ರಸಕ್ತ ಸಾಲಿನ ಪದಾಧಿಕಾರಿಗಳು: ಸಿ. ಹೆಚ್. ವಾಸುದೇವ್ (ಅಧ್ಯಕ್ಷ), ಕೆ. ಎಂ. ನರಸಿಂಹಯ್ಯ (ಉಪಾಧ್ಯಕ್ಷ), ಆರ್. ಕ್ಷೇತ್ರಪಾಲಯ್ಯ (ಕಾರ್ಯದರ್ಶಿ), ಜಿ.ಕೆ.ಹಿರಿಯಣ್ಣಯ್ಯ (ಸಹ ಕಾರ್ಯದರ್ಶಿ), ಕೆ. ಎ. ಪಟವರ್ಧನ್ (ಖಜಾಂಚಿ), ಬಿ. ಸೀತಾರಾಮ ಭಟ್ (ಲೆಕ್ಕ ತಪಾಸಕರು) ಹಾಗೂ ಕೆಳಕಂಡವರು ನಿರ್ದೇಶಕರು: ಕೆ. ನಾರಾಯಣ, ಎಂ.ನಾಗೇಶ ಶಾಸ್ತ್ರಿ, ಎಸ್. ಮಂಜುನಾಥ, ಹೆಚ್.ನಾಗಭೂಷಣರಾವ್ ಮಹಮುದ್ ಹಯ್ಯದ್, ಕೆ. ಶ್ರೀನಿವಾಸ ರಾವ್, ಜಿ.ಕೆ.ಸೂರ್ಯನಾರಾಯಣ ಭಟ್, ಕೆ. ಎನ್. ನಾರಾಯಣರಾವ್, ಟಿ.ಎಸ್. ಕೃಷ್ಣಮೂರ್ತಿ, ಫಕೀರ್ ಸಾಬ್, ಮೇರಿಬಾಯಿ ಮತ್ತು ಛಾಬಿ.

ಗಣಪತಿ ವಿಸರ್ಜನೆ

ಕಳೆದ ೧೬ ದಿನಗಳಿಂದ ಇಲ್ಲಿ ನಡೆದ ಪೌರ ಗಣೇಶೋತ್ಸವ ಸಮಿತಿಯ ಕಾರ್ಯಕ್ರಮ ಸೆ. ೨೫ ರಂದು ಕೊನೆಗೊಂಡು, ಗಣಪತಿಯನ್ನು ಊರಿನಲ್ಲಿ ಮೆರವಣಿಗೆಯೊಂದಿಗೆ ಗ[illegible]ಕೆರೆಯಲ್ಲಿ ವಿಸರ್ಜಿಸಲಾಯಿತು.

ಸನ್ಮಾನ

ಶೃಂಗೇರಿ: ಇಲ್ಲಿನ ಜೆ. ಸಿ. ಬಿ. ಎಂ. ಕಾಲೇಜಿನಲ್ಲಿ ಈ ವರ್ಷ ೮, ೯ ಮತ್ತು ೧೦ ನೇ ರ್‍ಯಾಂಕ್ ಪಡೆದ ಪ್ರಕಾಶ್, ವೆಂಕಟೇಶಮೂರ್ತಿ ಮತ್ತು ಚಂದ್ರಶೇಖರ ಭಟ್ಟ ಇವರುಗಳನ್ನು ಸೆ. ೨೨ ರಂದು ಸನ್ಮಾನಿಸಲಾಯಿತು.

ಕಚೇರಿ ಸ್ಥಳಾಂತರ

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಮಗಳೂರು ಉಪವಿಭಾಗ, ಇವರ ಕಛೇರಿಯನ್ನು ಚಿಕ್ಕಮಗಳೂರು ರತ್ನಗಿರಿ ರಸ್ತೆಯಲ್ಲಿದ್ದ ಕಟ್ಟಡದಿಂದ ಷರೀಫ್ ರಸ್ತೆಯಲ್ಲಿರುವ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ನ. ರಾ. ಪುರ ಕಿರಿಯ ಕಾಲೇಜಿನಲ್ಲಿ ವೃತ್ತಿ ಶಿಕ್ಷಣ ತರಗತಿಗಳು

ನ. ರಾ. ಪುರ: ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಈ ವರ್ಷದಿಂದ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಅಗ್ರಿಕಲ್ಚರಲ್ ಎಕನಾಮಿಕ್ಸ್ ಮತ್ತು ಫಾರಂ ಮ್ಯಾನೇಜ್‌ಮೆಂಟ್ ಎಂಬ ಎರಡು ಐಚ್ಛಿಕ ವಿಷಯಗಳನ್ನುಳ್ಳ ಪಿಯುಸಿ ತರಗತಿಗಳು ಆರಂಭವಾಗಿವೆ. ಇವು ರೈತ ಕುಟುಂಬದ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯೆಂದು ಹೇಳಲಾಗಿದ್ದು, ಎಸ್ಸೆಸ್ಸೆಲ್ಸಿ ಮುಗಿಸಿದವರು ಸೇರಬಹುದು. ಪಿಯುಸಿ ಆದವರಿಗೆ ಭಾಷಾ ವಿಷಯಗಳಲ್ಲಿ ವಿನಾಯ್ತಿ ಇದೆ.

ಸಹಕಾರ ಸಂಘದ ಅಧ್ಯಕ್ಷರು

ಹಾಲ್ಮುತ್ತೂರು: ಇಲ್ಲಿನ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿ ಜಯರಾಮ ಜೋಯ್ಸ್ ಅವರು ಅವಿರೋಧವಾಗಿ ಪುನರಾಯ್ಕೆ ಆಗಿದ್ದಾರೆ. ಈ ಕೆಳಕಂಡ ನಿರ್ದೇಶಕ ಮಂಡಳಿ ಸಹ ಅವಿರೋಧವಾಗಿ ಆಯ್ಕೆಯಾಗಿದೆ: ಹೆಚ್. ಆರ್. ಅನಂತಮೂರ್ತಿ, ತಮ್ಮಯ್ಯ ಗೌಡ, ಬಿ.ಕೆ ಶ್ರೀನಿವಾಸಯ್ಯ, ಮಲ್ಲಪ್ಪ ಗೌಡ, ಸುರೇಶ್ ನಾಯ್ಕ, ಟಿ. ಎಸ್. ಸುಬ್ರಮಣ್ಯ, ಹೆಚ್.ಡಿ ಶ್ರೀನಿವಾಸ್. ಹೆಚ್.ವಿ. ನಾಗರಾಜ್.

ಮತ್ತೆ ಹಬ್ಬುತ್ತಿರುವ ಮಟ್ಕಾ?

ಕೊಪ್ಪ: ಶೃಂಗೇರಿ, ಕೊಪ್ಪ ತಾ॥ ಗಳಲ್ಲಿ ಮಟ್ಕಾ ಮತ್ತೆ ಹಬ್ಬುತ್ತಿದೆ ಎಂದು ಹೇಳಲಾಗುತ್ತಿದೆ. ಈಚೆಗೆ ಶೃಂಗೇರಿ ಠಾಣಾಧಿಕಾರಿ ಸದಾನಂದ ವರ್ನೇಕರ್ ಕೊಂಡಗೆರೆ, ಮೆಣಸೆ, ಹೊನ್ನವಳ್ಳಿಗಳಲ್ಲಿ ದಾಳಿ ನಡೆಸಿ ಮೂವರಿಗೆ ಕೋರ್ಟಿನ ಮೂಲಕ ಜುಲ್ಮಾನೆ ಹಾಕಿಸಿದ್ದಾರೆ. ಆದರೆ ಬೇಗಾರು–ಬಿದರಗೋಡು ಮಧ್ಯೆ ತಾ॥ ಗಡಿಯ ಕಾರಣ ಅನಿರ್ಬಾಧಿತವಾಗಿ ನಡೆಯುತ್ತಿದೆ ಎನ್ನಲಾಗಿರುವ ಇದನ್ನು ಹಿಡಿಯುವುದು ಅಸಾಧ್ಯವಾಗಿದೆ ಎನ್ನಲಾಗಿದೆ.

ಕೊಪ್ಪ ತಾ॥ ನ ಕುದ್ರೆಗುಂಡಿಯಲ್ಲಿ, ನಿಲುವಾಗಿಲು–ಮಾವಿನ ಕಟ್ಟೆಗಳ ನಡುವೆ–ಹೀಗೆ ಹಲವು ಕಡೆಗಳಲ್ಲೂ ಮಟ್ಕಾ ಸುದ್ದಿಗಳು ಕೇಳಿ ಬರುತ್ತಿವೆ.

ಗಾಂಧೀ ಜಯಂತಿಯ ಹಾರ್ದಿಕ ಶುಭಾಶಯಗಳು

ಗ್ರಾಮ್ಸ್: 'ರಾಜಾವರ್ಕ್ಸ್' ಫೋನ್ ನಂ. 73

ರಾಜಾ ಇಂಡಸ್ಟ್ರಿಯಲ್ ವರ್ಕ್ಸ್

ರಾಜಾನಗರ ಶೃಂಗೇರಿ—577 139

ಮಿಟ್ಸುಬಿಷಿ ಪವರ್ ಟಿಲ್ಲರ್‌ಗಳಿಗೆ

ಚಿಕ್ಕಮಗಳೂರು, ಶಿವಮೊಗ್ಗ, ಬೆಳಗಾಂ ಮತ್ತು
ರಾಯಚೂರು ಜಿಲ್ಲೆಗಳ ವಿತರಣೆಗಾರರು;
ಹಾಗೂ
ರಾಜಾ ಟ್ರೈಲರ್, ಟ್ಯಾಂಕರ್ ಟ್ರೈಲರ್, ಗೋಬರ್ ಗ್ಯಾಸ್ ಹೋಲ್ಡರ್‌ಗಳು
ಮತ್ತು ವ್ಯವಸಾಯ ಉಪಕರಣಗಳ ತಯಾರಕರು

ಶಾಖೆಗಳು

ಗಾರ್ಡನ್ ಏರಿಯಾ,
ಶಿವಮೊಗ್ಗ—577201
ಫೋನ್: 3561

ಬಸವನಹಳ್ಳಿ
ಚಿಕ್ಕಮಗಳೂರು.

ಬಸ್‌ಸ್ಟ್ಯಾಂಡ್ ರಸ್ತೆ
ಗಂಗಾವತಿ,
ರಾಯಚೂರು ಜಿಲ್ಲೆ

ಗಾತ್ರ, ಸಾಮರ್ಥ್ಯ ಹಾಗೂ ಕಾರ್ಯದಕ್ಷತೆಗಳಲ್ಲಿ ಅತ್ಯುತ್ತಮವಾದ

ಮಿಟ್ಸುಬಿಷಿ ಶಕ್ತಿ ಪವರ್ ಟಿಲ್ಲರ್

ಪ್ರತಿಯೊಬ್ಬ ರೈತನಿಗೂ ಅತ್ಯುಪಯುಕ್ತವಾದದ್ದು.



ಹೊಳಿಕೆ (ಒಣ ಉಳುಮೆ) ಮಾಡುವುದು, ಉಳುವುದು,
ನಳ್ಳಿ ಮಾಡುವುದು, ಓರಿಗಳನ್ನು ಮಾಡುವುದು, ನೀರೆತ್ತುವುದು,
ನಡು ಕೃಷಿ ಮಾಡುವುದು, ಕಬ್ಬಿನ ಕಾರ್ಯಾಚರಣೆ, ಹಾಗೂ
ಒಂದು ಟನ್ ಭಾರದವರೆಗೆ ಸಾಗಾಣಿಕೆ—ಇಷ್ಟನ್ನೂ
ಇದೊಂದೇ ಯಂತ್ರ ಮಾಡಬಲ್ಲದು !

ಮಿಟ್ಸುಬಿಷಿ ಹೆವಿ ಇಂಡಸ್ಟ್ರೀಸ್ ಆಫ್ ಜಪಾನ್
ಅವರ ತಾಂತ್ರಿಕ ನೆರವಿನೊಡನೆ ಭಾರತದಲ್ಲಿ
ಇದರ ತಯಾರಕರು

ಮೆಸರ್ಸ್ ವಿ. ಎಸ್. ಟಿ. ಟಿಲ್ಲರ್ಸ್ ಟ್ರಾಕ್ಟರ್ಸ್ ಲಿಮಿಟೆಡ್,

ಪೋಸ್ಟ್ ಬಾಕ್ಸ್ ನಂ. 4801,
ಬೆಂಗಳೂರು-48